ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ಕೇಂದ್ರ ಬದಲಾವಣೆ/**02/2020-21** ದಿನಾಂಕ: **18/05/2020**

- ಸುತ್ತೋಲೆ -

ವಿಷಯ : ಏಪ್ರಿಲ್-2020 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಶಾಲಾ ವಿದ್ಯಾರ್ಥಿಗಳ ಕೇಂದ್ರ ಬದಲಾವಣೆ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಚೇರಿ ಪತ್ರ ಸಂಖ್ಯೆ:ಸಿ1/ಎಸ್.ಎಸ್.ಎಲ್.ಸಿ/ಪ.ಸು-2020/44/2019-20 ದಿನಾಂಕ : 06.05.20 ಹಾಗು ಗಣಕಶಾಖೆ/ಎಸ್.ಎಸ್.ಎಲ್.ಸಿ/ವ.ಕಾ.ಕೇ.ಬ/01/2020 ದಿನಾಂಕ :15/05/2020

2. ಮಾನ್ಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 18/05/2020 ರಂದು ಜರುಗಿದ ಇಲಾಖಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿರುವಂತೆ

*****

ಕೋವಿಡ್-19 ಕೊರೋನಾ ಹಿನ್ನಲೆಯಲ್ಲಿ ಮಾರ್ಚ/ಏಪ್ರಿಲ್-2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಉಲ್ಲೇಖ 2 ರಂತೆ ಈ ಪರೀಕ್ಷೆಗಳನ್ನು ದಿನಾಂಕ 25/06/2020 ರಿಂದ ದಿನಾಂಕ 04/07/2020 ರ ವರೆಗೆ ನಡೆಸಲು ನಿರ್ಧರಿಸಲಾಗಿದೆ.

ಕೋವಿಡ್-19 ಕೊರೋನಾ ಹಿನ್ನಲೆಯಲ್ಲಿ ವಲಸೆ ಕಾರ್ಮಿಕರ ಮಕ್ಕಳು ತಾವು ವ್ಯಾಸಂಗ ಮಾಡಿರುವ ಶಾಲೆಗಳಿಗೆ ಮರಳುವ ಹಾಗು ಈಗಾಗಲೇ ಪ್ರವೇಶ ಪತ್ರದಲ್ಲಿ ನಮೂದಾದ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಸಾಧ್ಯವಾಗುವುದಿಲ್ಲವೆನ್ನುವ ಕಾರಣಕ್ಕೆ ತಾವು ಮರಳಿ ಹೋಗಿರುವ ಸ್ವಗ್ರಾಮ/ಪ್ರದೇಶದ ಹತ್ತಿರದ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಈಗಾಗಲೇ ಅವಕಾಶ ನೀಡಲಾಗಿದೆ.

ಮುಂದುವರಿದು, ವಸತಿ ಶಾಲೆಗಳನ್ನು ಹಾಗೂ ಹಾಸ್ಟೆಲ್‌ಗಳನ್ನು ಜಿಲ್ಲೆಗಳಲ್ಲಿ ಕ್ವಾರಂಟೈನ್ ಕೇಂದ್ರಗಳಾಗಿ ಬಳಸಲಾಗುತ್ತಿರುವುದರಿಂದ ಈ ವಸತಿ ಶಾಲೆಗಳ ಹಾಗೂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೂ ಸಹ ತಮ್ಮ ಮೂಲ ಸ್ಥಾನದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ಉಲ್ಲೇಖ 2 ರಂತೆ ನಿರ್ಧರಿಸಲಾಗಿದೆ.

ಆದ್ದರಿಂದ, ಶಾಲಾ ಮುಖ್ಯಶಿಕ್ಷಕರು ಅವರ ಶಾಲೆಯಲ್ಲಿನ ವಲಸೆ ಕಾರ್ಮಿಕರ ಮಕ್ಕಳು ಹಾಗು ವಸತಿ ಶಾಲೆಗಳ ಹಾಗೂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅವರು ಮೂಲ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವ ಬದಲಾಗಿ ತಮ್ಮ ಮೂಲ ಜಿಲ್ಲೆ/ತಾಲೂಕಿನ ಯಾವ ಕೇಂದ್ರದಲ್ಲಿ ಪರೀಕ್ಷೆ ಬರೆಯುಲು ಇಚ್ಛೆಸಿದ್ದಾರೆ ಎನ್ನುವ ಮಾಹಿತಿ ಪಡೆದು, ಶಾಲಾ ಲಾಗ್-ಇನ್ ನಲ್ಲಿ ನಮೂದಿಸುವುದು.

ಶಾಲಾ ಮುಖ್ಯಶಿಕ್ಷಕರು ಸದರಿ **ಮಾಹಿತಿಯನ್ನು ಮಂಡಳಿಯ ಜಾಲತಾಣದ (kseeb.kar.nic.in) ಶಾಲಾ ಲಾಗ್-ಇನ್‌ನಲ್ಲಿ ನಮೂದಿಸಲು ಕಡೆಯ ದಿನಾಂಕ 25/05/2020 ಆಗಿರುತ್ತದೆ.**

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು 18/5/20

ಅಗತ್ಯ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗು ಕ್ಷೇತ್ರಶಿಕ್ಷಣಾಧಿಕಾರಿಗಳು ಇವರುಗಳಿಗೆ
2) ರಾಜ್ಯದ ಎಲ್ಲಾ ಶಾಲೆಯ ಮುಖ್ಯಶಿಕ್ಷಕರುಗಳಿಗೆ